ರಾಜ್ಯದಲ್ಲಿ ಬೀಡಿ ಕಾರ್ಮಿಕರ ಮಕ್ಕಳಿಗೆ ಶಿಷ್ಯವೇತನ ನೀಡುವುದು.

2216(2744) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ :— ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ಒದಗಿಸುವುದು)

ಆ) ಬೀಡಿ ಕಾರ್ಮಿಕರ ಮಕ್ಕಳಿಗಾಗಿ ಸರಕಾರ ಶಿಷ್ಯವೇತನ ನೀಡುತ್ತಿದೆಯೇ? ಎಷ್ಟು ವಿದ್ಯಾರ್ಥಿ : ವಿದ್ಯಾರ್ಥಿನಿಯರು ಈ ಅವಕಾಶ ಪಡೆಯುತ್ತಿದ್ದಾರೆ?

ಇ) ಸದರಿ ಯೋಜನೆಯಿಂದ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಹಣದ ಅವಶ್ಯಕತೆ ಇದೆ?

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :—

ಅ) ರಾಜ್ಯದಲ್ಲಿ ಒಟ್ಟು 2,87,660 ಬೀಡಿ ಕಾರ್ಮಿಕರಿದ್ದಾರೆ (ಜಿಲ್ಲಾವಾರು ವಿವರವನ್ನು ಅನುಬಂಧ 1 ರಲ್ಲಿ ಲಗತ್ತಿಸಿದೆ.

ಆ) ಬೀಡಿ ಕಾರ್ಮಿಕರ ಮಕ್ಕಳಿಗಾಗಿ ರಾಜ್ಯ ಸರ್ಕಾರವು ಯಾವುದೇ ರೀತಿ ಶಿಷ್ಯವೇತನವನ್ನು ನೀಡುತ್ತಿಲ್ಲ, ಆದರೆ ಕೇಂದ್ರ ಸರ್ಕಾರವು ಬೀಡಿ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಸೌಲಭ್ಯಗಳನ್ನು 2000-01ನೇ ಸಾಲಿಗೆ ಈ ಕೆಳಕಂಡಂತೆ ಅನುಷ್ಠಾನಗೊಳಿಸುತ್ತಿದೆ.

| ವರ್ಷ | ಯೋಜನೆ | ನಿಧಿ | ಸೌಲಭ್ಯ ಪಡೆದ ಫಲಾನುಭವಿಗಳ ಸಂಖ್ಯೆ (ವಿದ್ಯಾರ್ಥಿ : ವಿದ್ಯಾರ್ಥಿನಿಯರು) |
|---|---|---|---|
| 2000-01 | ಶಿಷ್ಯವೇತನ | ಬೀಡಿ | 36,477 |
| 2000-01 | ಸಮವಸ್ತ್ರ, ಸ್ಲೇಟು ಪುಸ್ತಕಗಳು | ಬೀಡಿ | 6,000 |
| 2000-01 | ಹಾಜರಾತಿ ಪ್ರೋತ್ಸಾಹ ಧನ | ಬೀಡಿ | 18,812 |
| 2000-01 | ಅಂಕಗಳಿಕೆಯಲ್ಲಿ ಪ್ರತಿ ಶೇಕಡ ಪ್ರೋತ್ಸಾಹ ಧನ | ಬೀಡಿ | 1,446 |
| | | ಒಟ್ಟು | 62,735 |

ಇ) ಕೇಂದ್ರ ಸರ್ಕಾರವು ಮೇಲ್ಕಂಡ ಸೌಲಭ್ಯವನ್ನು ವಿಸ್ತರಿಸಿರುವುದರಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಯಾವುದೇ ಆರ್ಥಿಕ ಹೊರೆ ಬರುವುದಿಲ್ಲ.

**ಅನುಬಂಧ**

**ಕರ್ನಾಟಕ ರಾಜ್ಯದ ಬೀಡಿ ಕಾರ್ಮಿಕರ ಸಂಖ್ಯೆ (ಜಿಲ್ಲಾವಾರು)**

| | | | |
|---|---|---|---|
| 1. | ದಕ್ಷಿಣ ಕನ್ನಡ ಜಿಲ್ಲೆ | - | 1,81,083 |
| 2. | ಉಡುಪಿ ಜಿಲ್ಲೆ | - | 57588 |
| 3. | ಶಿವಮೊಗ್ಗ ಜಿಲ್ಲೆ | - | 200 |
| 4. | ಬೆಂಗಳೂರು ನಗರ ಜಿಲ್ಲೆ | - | 1,973 |
| 5. | ಬೆಂಗಳೂರು ಗ್ರಾಮಾಂತರ ಜಿಲ್ಲೆ | - | 9.248 |
| 6. | ತುಮಕೂರು ಜಿಲ್ಲೆ | - | 8,348 |
| 7. | ಕೋಲಾರ ಜಿಲ್ಲೆ | - | 3,081 |
| 8. | ಮೈಸೂರು ಜಿಲ್ಲೆ | - | 1,610 |
| 9. | ಚಾಮರಾಜ ನಗರ ಜಿಲ್ಲೆ | - | 3,715 |
| 10. | ಮಂಡ್ಯ ಜಿಲ್ಲೆ | - | 6,282 |
| 11. | ದಾವಣಗೆರೆ ಜಿಲ್ಲೆ | - | 5,736 |
| 12. | ಬಳ್ಳಾರಿ ಜಿಲ್ಲೆ | - | 499 |
| 13. | ಹುಬ್ಬಳ್ಳಿ-ಧಾರವಾಡ ಜಿಲ್ಲೆ | - | 1,228 |
| 14. | ಗದಗ ಜಿಲ್ಲೆ | - | 98 |
| 15. | ಹಾವೇರಿ ಜಿಲ್ಲೆ | - | 2,160 |
| 16. | ಬೆಳಗಾಂ ಜಿಲ್ಲೆ | - | 2,795 |
| 17. | ಬಿಜಾಪುರ ಜಿಲ್ಲೆ | - | 91 |
| 18. | ಬಾಗಲಕೋಟೆ ಜಿಲ್ಲೆ | - | 783 |
| 19. | ಗುಲ್ಬರ್ಗಾ ಜಿಲ್ಲೆ | - | 409 |
| 20. | ಕೊಪ್ಪಳ ಜಿಲ್ಲೆ | - | 104 |
| 21. | ಹಾಸನ ಜಿಲ್ಲೆ | - | 564 |
| 22. | ಚಿಕ್ಕಮಗಳೂರು ಜಿಲ್ಲೆ | - | 70 |
| 23. | ಚಿತ್ರದುರ್ಗ ಜಿಲ್ಲೆ | - | -- |
| 24. | ರಾಯಚೂರು ಜಿಲ್ಲೆ | - | -- |
| 25. | ಮಡಕೇರಿ ಜಿಲ್ಲೆ | - | -- |
| 26. | ಕಾರವಾರ ಜಿಲ್ಲೆ | - | -- |
| 27. | ಬೀದರ್ ಜಿಲ್ಲೆ | - | -- |
| | ಒಟ್ಟು | - | 2,87,660 |